

## ಮುಖಗವುಸೇ ಮನುಷ್ಯನ ಗುರುತಾಯಿತೇ?

ಜಗತ್ತಿನ ಎಲ್ಲ ಮನುಷ್ಯರನ್ನು ಒಂದು ತಂತುವಿನಲ್ಲಿ ಜೋಡಿಸುವುದಾದರೆ ಅದು ಯಾವುದು? ಸದ್ಯದಲ್ಲಿಯಂತೂ ಮುಖಗವಸೇ ಸರಿ. ಜಗತ್ತಿನಾದ್ಯಂತ ಕೊರೊನಾ ಸಮರದಲ್ಲಿ ಲಕ್ಷಾಂತರ ಜನರು ಭಾಗಿಯಾಗಿದ್ದಾರೆ. ಈ ಸಮರಾಂಗಣದಲ್ಲಿ ಕೈಯಲ್ಲಿ ಗುರಾಣಿ ಇರುವುದಿಲ್ಲ; ಬದಲಿಗೆ ಮುಖದಲ್ಲಿ ಮಾಸ್ಕ್ ಇರುತ್ತದೆ. ಮಾಸ್ಕ್ ಎನ್ನುವುದು ಇಂದು ಮಾಸ್‌ನ ಸಾಮಾನ್ಯಗುರುತಾಗಿಬಿಟ್ಟಿದೆ. ಈ ಚಿತ್ರದಲ್ಲಿಯೂ ನೋಡಿ, ಎಷ್ಟೆಲ್ಲ ಮನುಷ್ಯಾಕೃತಿಗಳಿವೆ. ಅವರೆಲ್ಲರೂ ಕೊರೊನಾ ರೋಗಿಗಳ ಸೇವೆಯಲ್ಲಿ ತೊಡಗಿರುವವರು. ಅವರೆಲ್ಲರಲ್ಲಿ ನಾವೆಲ್ಲರೂ ಒಂದು ಎನ್ನುವ ಭಾವವನ್ನು ಹುಟ್ಟಿಸುವ ಸಂಕೇತದಂತೆ ಮಾಸ್ಕ್ ಭಾಸವಾಗುತ್ತಿದೆ. ಅಂದಹಾಗೆ ಈ ಕಲಾಕೃತಿ ಕೌಲಾಲಂಪುರದ ಕಲಾವಿದೆ ವ್ಯಾನ್ ಜಮೀಲಾ ವ್ಯಾನ್ ಶೈಫುಲ್ ಬಹ್ರಿ ರಚಿಸಿದ್ದು. ಹದಿನೇಳು ವರ್ಷದ ಈ ಕಲಾವಿದೆಯ ಕಲಾಕೃತಿ ಕೊರೊನಾ ವಾರಿಯರ್ಸ್‌ಗೆ ಸಲ್ಲಿಸಿದ ಕುಂಚ ಕೃತಜ್ಞತೆಯಂತೆ ತೋರುತ್ತದೆ.

ಚಿತ್ರ/ಎಎಫ್‌ಪಿ.